ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಅರಮನೆಯ ಸ್ವಾಧೀನಕ್ಕೆ ಸೇರಿದೆಯೆಂದು 1868ನೆಯ ಇಸವಿಯ ರೆಕ್ಕಾರ್ಡಿನಲ್ಲಿ ಗೊತ್ತಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಯಾವಾಗ ಬಂದಿದೆಯೆಂದು ಹೇಳುವುದಕ್ಕಾಗುವುದಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—1868ರಲ್ಲೇ ಅವರಿಗೆ ಸೇರಿತ್ತೆಂದು ಹೇಳುವಾಗ ಅದಕ್ಕಿಂತಲೂ ಹೆಚ್ಚಾಗಿ ಹೇಳಬೇಕೆ?

ಶ್ರೀ ಎಸ್. ರಂಗರಾಮಯ್ಯನವರು.—ಸುತ್ತಮುತ್ತಲೂ ಇರುವ ಗ್ರಾಮಸ್ಥರಿಂದ ದನಗಳ ಮೇಲಿಗೆ ಬಹಳ ಅಡ್ಡಿಯಾಗಿದೆಯೆಂದು ದೂರು ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿದೆ.

ಶ್ರೀ ಎಸ್. ರಂಗರಾವ್ ಯ್ಯನವರು.—ಈಗ ತಲೆಯೊಂದಕ್ಕೆ ಒಂದು ರೂಪಾಯಿನಂತೆ ಫೀಸನ್ನು ತೆಗೆದು ಕೊಳ್ಳುವುದು ಯಾವಾಗಿನಿಂದ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಲೆಯೊಂದಕ್ಕಲ್ಲ ಎಕರೆಯೊಂದಕ್ಕೆ ಒಂದು ರೂಪಾಯಿ ಹಾಕಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಸುತ್ತಮುತ್ತಲಿನ ಗ್ರಾಮಸ್ಥರ ದನಗಳಿಗೆ ಮೇಲಿಲ್ಲದೆ ಕೊಂದರಯಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಮನವಿಗಳು ಬಂದಿವೆ, ಕನಿಕರದಿಂದ ಅರಮನೆಯವರು ಅವಕಾಶ ಕೊಟ್ಟಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಒಂದು ರೂಪಾಯಿ ತೆಗೆದ ಕೊಂಡರೂ ಮೊದಲು ಅರಮನೆಯವರು ಹುಲ್ಲನ್ನು ಕೊಯ್ದು ಆಮೇಲೆ ದನಗಳನ್ನು ಬಿಡುತ್ತಿರುವುದು ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಪಶೀಲು ಗೊತ್ತಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಅದನ್ನು ಕೂಲಂಕಷವಾಗಿ ವಿಚಾರಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ವಿಚಾರ ಮಾಡೇ ಉತ್ತರ ಹೇಳಿರುವುದು.

ಶ್ರೀ ಎಸ್. ರಂಗರಾಮಯ್ಯನವರು.—ಅವರು ಯಾವಾಗ ಬಿಡುತ್ತಾರೆ, ಯಾವ ಕಾಲದಿಂದ ಯಾವ ಕಾಲದವರೆಗೆ ಒಂದು ರೂಪಾಯಿ ತೆಗೆದುಕೊಳ್ಳುತ್ತಾರೆ ಎಂಬುದನ್ನು ನೋಡಿ ಗ್ರಾಮಸ್ಥರ ಅಹವಾಲನ್ನು ಅಂಗೀಕಾರ ಮಾಡಿಕೊಳ್ಳಲು ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಷ್ಟು ಅನುಕೂಲ ಮಾಡಿ ಎಂದು ಅರಮನೆಯವರಿಗೆ ತಿಳಿಸಿದ್ದೇವೆ.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ನರಸಾಂಬುಧಿಕೆರೆ ಅಂಗಳ ಸರ್ಕಾರಕ್ಕೆ ಸೇರಿದೆಯೆಂದು ಅನೇಕ ಸರ್ಕಾರಿ ರೆಕ್ಕಪತ್ರಗಳಿಂದ ಗೊತ್ತಾಗುವುದಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಒಂದು ಕಡೆ ಆ ರೀತಿ ಅನುಮಾನವಿದೆ. ಬಾಕಿ 3-4 ರಿಕಾರ್ಡು ನೋಡಿದ್ದರಲ್ಲಿ ಅರಮನೆಗೇ ಸೇರಿತ್ತೆಂದು ಗೊತ್ತಾಗಿದೆ.

ಶ್ರೀ ಟಿ. ಮಾದಯ್ಯಗೌಡರು.—ಎಕರೆಯೊಂದಕ್ಕೆ ಒಂದು ರೂಪಾಯಿನಂತೆ ತೆಗೆದುಕೊಳ್ಳುವಾಗ ಯಾವ ಗ್ರಾಮಗಳಿಗೆ ಎಷ್ಟು ಎಕರೆಯುದೆ ಎಂದು ಡೀಮಾರ್ಕೇಷನ್ ಮಾಡಿಬಿಟ್ಟಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಾತ್ಕಾಲಿಕವಾಗಿ 20 ಎಕರೆ ಬಿಟ್ಟಿದೆ.

ಶ್ರೀ ಟಿ. ಮಾದಯ್ಯಗೌಡರು.—ಅನೇಕ ರೈತರು ಅವಕಾಶ ಪಡೆದಿರುವವರು ಉಪಯೋಗಿಸದೆ ಈಗಾಗಲೇ ಗೋಗ್ರಹಣ ನಡೆಯುತ್ತಿರುವುದು ನಕಾರದ ಗಮನಕ್ಕೆ ಬಂದಿದೆಯ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿಲ್ಲ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ ನಿಮ್ಮಪಂಗಡ).—ಪೀರನಪುರ ಮತ್ತು ಚಿನ್ನದಗುಂಡಿ ಗ್ರಾಮಗಳಿಗೆ ಸೇರಿರುವ ಗೋಮಾಳ ಎಷ್ಟು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಗೋಮಾಳ ಅಲ್ಲಿಲ್ಲ ಎಂದು ಹೇಳಿದೆ.

ಶ್ರೀ ಎಂ. ಮಾದಯ್ಯನವರು.—ಒಂದು ಗ್ರಾಮದ ವಿಚಾರ ಮಾತ್ರ ಹೇಳಿದೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಮಜರೆ ಗ್ರಾಮ; hamlet.

ಶ್ರೀ ಎಂ. ಮಾದಯ್ಯನವರು.—ಯಾರು ಈ ಸಮಾಚಾರವನ್ನು ಕೊಟ್ಟರು?

The Hon'ble Sri H. SIDDAIYA.—From the proper quarters we have gathered it.

ಶ್ರೀ ಎಂ. ಮಾದಯ್ಯನವರು.—ಜಿಲ್ಲಾಧಿಕಾರಿಗಳಿಂದ ಸಮಾಚಾರ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿದೆ.

ಶ್ರೀ ಎಂ. ಮಾದಯ್ಯನವರು.—ಗೋಮಾಳ ಆ ಗ್ರಾಮಗಳಿಗಿದೆಯೆಂದು ನಿರ್ಧರಮಾಡಿಕೊಟ್ಟರೆ, prove ಮಾಡಿದರೆ ಬಿಡಿಸಿಕೊಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—Prove ಮಾಡಿದರೆ ಆಗಬಹುದು.

New rules for the working of the Public Service Commission.

Q.—277. **Sri T. C. HONNAPPA** (Mysore District—General).—

Will the Government be pleased to state:—

(*a*) the rules under which the Public Service Commission is doing its work at present;

(*b*) when these rules were framed and whether it is not desirable to frame a new enactment in this behalf in accordance with the principles of democracy?

A.—**The Hon'ble Sri H. SIDDAIYA** (Minister for Revenue and Excise).—

(*a*) Revised rules in recruitment issued in Government Order No. 6-105—1-34-1, dated 3rd July 1934 and the amendments made thereto from time to time.

(*b*) *Vide* answer to (*a*). The question of framing and issuing new rules for the working of the Public Service Commission is under consideration.

ಶ್ರೀ ಟಿ. ಸಿ. ಹೊನ್ನಪ್ಪನವರು :—ಪಬ್ಲಿಕ್ ಸರ್ವಿಸ್ ಕಮಿಷನ್ ಕೆಲಸ ಮಾಡುತ್ತಿರುವುದು 1934ನೆಯ ಇಸವಿಯ ನಿಬಂಧನೆ ಪ್ರಕಾರ ಎಂದು ಹೇಳಿದೆ. ಆದರೆ ಹಿಂದಿನ ಸರ್ಕಾರದ ಕಾನೂನು ಪ್ರಜಾಪ್ರಭುತ್ವ ಸರ್ಕಾರಕ್ಕನುಗುಣವಾದ ಕಾನೂನಾಗಿದೆಯೆ ?

ಅಧ್ಯಕ್ಷರು :—ಪಬ್ಲಿಕ್ ಸರ್ವಿಸ್ ಕಮಿಷನ್ ಇಂಥ ಕಾನೂನು ಪ್ರಕಾರ ಕೆಲಸ ಮಾಡುತ್ತಿದೆ, ಹೊಸ ನಿಬಂಧನೆಗಳನ್ನು ರಚಿಸುವ ವಿಷಯ ಪರಿಶೀಲನೆಯಲ್ಲಿದೆಯೆಂದು ನಿನ್ನೆಯೇ ಹೇಳಿದರು.

ಶ್ರೀ ಟಿ. ಸಿ. ಹೊನ್ನಪ್ಪನವರು :— ಹಾಗಾದರೆ ಈ ಮಧ್ಯಕಾಲದಲ್ಲಿ ನಡೆದ ಕೆಲಸ ಕಾರ್ಯಗಳು ಲೀಗಲ್ ಅಥವಾ ಇಲ್ಲೀಗಲ್ ಎಂದು ಹೇಳುತ್ತೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—Quite legal, ಈಗಿರುವ ಕಾನೂನು ಪ್ರಕಾರ ನಡೆದಿದೆ.

ಶ್ರೀ ಟಿ. ಸಿ. ಹೊನ್ನಪ್ಪನವರು :—ಈಗಿರುವ ಕಾನೂನು ಸರಿಯಾಗಿದೆಯೆ ಅಥವ ಇಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—ಆಲೋಚನೆಯಲ್ಲಿದೆಯೆಂದು ಹೇಳಿದೆ.

ಶ್ರೀ ಟಿ. ಸಿ. ಹೊನ್ನಪ್ಪನವರು :—ಹಿಂದಿನ ಸರ್ಕಾರ ಮಾಡಿರುವ ಕಾನೂನು ಪ್ರಜಾಪ್ರಭುತ್ವ ಸರ್ಕಾರಕ್ಕೆ ಅನ್ವಯಿಸಿದರೆ ಹೊಂದಿಕೆಯಾಗುತ್ತದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—ತಮ್ಮ ಪ್ರಶ್ನೆ ಅರ್ಥವಾಗುವುದಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು :—ಹೀಗೆ ಮಧ್ಯ ಕಾಲದಲ್ಲಿ ನಡೆದ ಕೆಲಸ ಮುಂದಿನ ಸರ್ಕಾರಕ್ಕೆ ವಿರೋಧವಾಗುವುದಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—ಅದು ಬಹಳ ಜನರನ್ನಾಗಿದೆ. ನನಗೆ ಅರ್ಥವಾಗುವುದಿಲ್ಲ. ಆ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ.

ಶ್ರೀ ಟಿ. ಸಿ. ಹೊನ್ನಪ್ಪನವರು :—ಹಿಂದಿನ ಕಾನೂನು ಪ್ರಕಾರ ಮಾಡಿರುವ ಕೆಲಸಕಾರ್ಯ, ಮಧ್ಯಕಾಲದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ಮಾಡಿರುವ ಅಪಾಯಿಂಟ್‌ಮೆಂಟ್ ವಗೈರೆ ಮುಂದೆ ರಚಿಸುವ ಕಾನೂನಿಗೆ ವಿರೋಧವಾಗಿದೆಯೆ ಅಥವಾ ಅನುಗುಣವಾಗಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—ಈಗ ಹೊಸ ಕಾನೂನು ಜಾರಿಗೆ ಬರುವವರೆಗೆ ಹಿಂದಿನ ಕಾನೂನಿನ ಪ್ರಕಾರ ಮಾಡುವುದರಿಂದ ಅದು ಸೂಕ್ತವಾಗಿದೆ.

ಶ್ರೀ ಟಿ. ಸಿ. ಹೊನ್ನಪ್ಪನವರು :—ಹಾಗಾದರೆ ಹೊಸ ನಿಬಂಧನೆಗಳು ಪರ್ಯಾಲೋಚನೆಯಲ್ಲಿವೆ ಯಾವಾಗ ಜಾರಿಗೆ ಬರುತ್ತವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—ಅದಷ್ಟು ಬೇಗ ಎಂದು ನಿನ್ನೆಯೇ ಹೇಳಿದೆ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ಹಾಂಗಡ) :—ಹೊಸ ರಾಜಾಂಗ ಜಾರಿಗೆ ಬಂದ ಮೇಲೆ ಅದರಲ್ಲಿರತಕ್ಕ ಆರ್ಟಿಕಲ್‌ಗಳನ್ನೆಲ್ಲ ಪಬ್ಲಿಕ್ ಸರ್ವಿಸ್ ಕಮಿಷನ್ ವಿಚಾರವಾಗಿ ಏನು ಡೈರೆಕ್ಷನ್ ಮಾಡಿದ್ದಾರೋ ಅದರ ಪ್ರಕಾರ ಕೂಡಲೇ ರೂಲ್ಸ್ ಫ್ರೇಂ ಮಾಡಬೇಕಾದ್ದು ಸರ್ಕಾರದವರ ಕರ್ತವ್ಯವಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—ಯಾವ ಕಮ್ಯೂನಿಟಿಗೆ inadequate representation ಇದೆಯೋ ಅದಕ್ಕೆ ತಕ್ಕ ಪ್ರಾತಿನಿಧ್ಯ ಕೊಡಬೇಕೆಂದಿದೆ. ಅದಕ್ಕೆ ಯಾವ ರೂಲ್ಸ್ ಫ್ರೇಂ ಮಾಡಬೇಕೆಂಬುದನ್ನು ಸರ್ಕಾರದವರು ಯೋಚನೆಮಾಡುತ್ತಿದ್ದಾರೆ.

ಶ್ರೀ ಎಂ. ಮಾದಯ್ಯನವರು :—ಇದನ್ನು ಅದಷ್ಟು ಜಾಗ್ರತೆ ಮಾಡದಿದ್ದರೆ ಕೆಲಸ ಸರಿಯಾಗಿ ನಿರ್ವಹಿಸುವುದಕ್ಕೆ ಆಗುವುದಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—ಅಷ್ಟೊಂದು ಕಷ್ಟವೇನೂ ಕಾಣುವುದಿಲ್ಲ. ಕಾಲಕ್ಕನುಸಾರವಾಗಿ ಹೊಸ ರೂಲ್ಸ್‌ನ ಅವಶ್ಯಕತೆ ಇದೆ. It is under consideration.

ಶ್ರೀ ಎಂ. ಮಾದಯ್ಯನವರು :—ಹಿಂದಿನ ರೂಲ್ಸ್ ಜಾರಿಯಲ್ಲಿದೆ, ಅದರಂತೆ ಕೆಲಸ ಮಾಡುತ್ತಿದ್ದೇವೆ ಎಂದ ಹೇಳಿದಿರಿ. ಅದು ಈಗಿನ ಕಾನ್‌ಸ್ಟಿಟ್ಯೂಷನ್‌ಗೆ ಪ್ರೊವಿಷನ್‌ಗೆ ಹೊಂದುವುದಿಲ್ಲ ಎಂಬುದು ಗೊತ್ತೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—ಅದೆಲ್ಲ ವನ್ನೂ ಅನುಸರಿಸಿ ಮಾಡುವವರೆಗೂ ಹಿಂದಿನದನ್ನೇ ಜಾರಿಯಲ್ಲಟ್ಟುಕೊಂಡು ಕೆಲಸಮಾಡುತ್ತಿದ್ದೇವೆ.

ಶ್ರೀ ಎಂ. ಮಾದಯ್ಯನವರು :—ಅದು ಸರಿಹೊಂದುವುದಿಲ್ಲ ಎಂಬುದು ಗೊತ್ತೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—ಅದು ತಮ್ಮ ಅಭಿಪ್ರಾಯ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ) :—ಗೆಜೆಟೆಡ್ ಹುದ್ದೆಗಳಿಗೂ ಇವರೇ ನೇಮಕ ಮಾಡುತ್ತಾರೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—ಅದು ಇಲ್ಲಿಯವರೆಗೂ ಇರಲಿಲ್ಲ. ಇನ್ನು ಮುಂದೆ ಇವರಿಗೇ ಏಕೆ ಕೊಡಬಾರದು ಎಂಬುದನ್ನು ಯೋಚನೆಮಾಡುತ್ತಾ ಇದ್ದಾರೆ.

ಶ್ರೀ ಬಿ. ಹುಚ್ಚೇಗೌಡರು :—ಗೆಜೆಟೆಡ್ ಹುದ್ದೆಗೆ ನೇಮಕವಾಗಲು ಇತರ ಎಲ್ಲಾ ಪಬ್ಲಿಕ್ ಸರ್ವಿಸ್ ಕಮಿಷನ್‌ಗಳವರಿಗೂ ಅಧಿಕಾರವಿದೆಯೇ, ಇಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—ಅದನ್ನೂ ವಿಚಾರ ಮಾಡುತ್ತಾ ಇದ್ದಾರೆ. ಈ ಅಧಿಕಾರವನ್ನು ಅವರಿಗೆ ಕೊಡುವುದು ಸೂಕ್ತವಾಗಿದೆ ಎಂದು ಸರ್ಕಾರದವರು ತಾತ್ಕಾಲಿಕವಾದ ತೀರ್ಮಾನಕ್ಕೆ ಬಂದಿದ್ದಾರೆ. It is not yet finalised.

ಶ್ರೀ ಬಿ. ಹುಚ್ಚೇಗೌಡರು :—ಗೆಜೆಟೆಡ್ ಹುದ್ದೆಗೆ ಇವರು ನೇಮಕ ಮಾಡಬಹುದೆಂದು ಆರ್ಡರ್ ಆಗಬೇಕಾದರೆ ಇಷ್ಟು ದಿವಸಬೇಕೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—ಅದಷ್ಟು ಬೇಗ ಮಾಡುತ್ತಾರೆ ಎಂದು ಹೇಳಿದೆ.

Irrigation Works in Kankanhally Taluk.

Q.—52. **Sri S. KARIAPPA** (Bangalore District—General).—

Will the Government be pleased to state —

the names of irrigation works in Kankanhalli Taluk—

(i) the estimates of which have been sanctioned ;

(ii) the estimates of which are pending sanction ;

(iii) the estimates of which are under preparation ?